Date :-19-07-2016

quickmarketreports.com

# ಮಹಾರಾಷ್ಟ್ರದಲ್ಲಿ ತೊಗರಿಬೇಳೆಯ ದರ ಏರುತ್ತಿದೆ

ತೊಗರಿ ಬೇಳೆ ದರವನ್ನು ಕರ್ನಾಟಕ ಸರಕಾರವು ನಿಯಂತ್ರಿಸಿ ರಾಜ್ಯದ ಎಪಿಎಂಸಿಗಳಲ್ಲಿ ಕೆ.ಜಿ.ಗೆ 130 ರೂಪಾಯಿಗೆ ಮಾರಾಟ ಮಾಡಲಾಗುತ್ತಿದೆ. ರಾಜ್ಯದ ಮಾಲ್‌ಗಳಲ್ಲೂ ದರಗಳು ಇಳಿಕೆಯಾಗಿವೆ. ಆದರೆ, ನೆರೆ ರಾಜ್ಯ ಮಹಾರಾಷ್ಟ್ರದಲ್ಲಿ ಈಗಲೂ ತೊಗರಿ ದರ ಏರುತ್ತಿದ್ದು, ಸದ್ಯ 220 ರೂ. ಮುಟ್ಟಿದೆ. ಮುಂದಿನ ದಿನಗಳಲ್ಲಿ ಕೆ.ಜಿ. ತೊಗರಿ ಬೇಳೆ ದರ 300 ರೂ. ತಲುಪುವ ಸಾಧ್ಯತೆಗಳಿವೆ ಎಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವರ್ತಕರು ಅಭಿಪ್ರಾಯ ಪಟ್ಟಿದ್ದಾರೆ.

ಹಬ್ಬದ ಸೀಸನ್ ಸಮೀಪದಲ್ಲಿದ್ದು, ತೊಗರಿ ದರ ಏರುವುದು ಖಚಿತ. ಮಾರುಕಟ್ಟೆಯಲ್ಲಿನ ದಾಸ್ತಾನು ಅನುಸರಿಸಿ ದರಗಳ ಏರಿಕೆ ಟ್ರೆಂಡ್ ಮುಂದುವರಿಯಲಿದೆ. 2 ವರ್ಷಗಳಿಂದ ನಿರಂತರ ಬರದಿಂದ ಬೇಳೆ ಉತ್ಪಾದನೆ ಇಳಿಮುಖವಾಗಿದೆ. ಎನ್ನುತ್ತಾರೆ ವರ್ತಕರು.

ನಮ್ಮ ರಾಜ್ಯದಲ್ಲಿ ಬೇಳೆ ಬೆಲೆ ಏರಿಕೆಯಿಲ್ಲ, ಬೆಂಗಳೂರಿನಲ್ಲಿ ತೊಗರಿ ಬೇಳೆ ದರದಲ್ಲಿ ಯಾವುದೇ ಏರಿಕೆಯಿಲ್ಲ